ವಿಷಯವನ್ನು ತಂದಾಗ ಅದನ್ನು ಅಧ್ಯಕ್ಷರು ಅರ್ಥಮಾಡಿಕೊಂಡು ಅರ್ಧ ಗಂಟೆ ಕಾಲದ ಚರ್ಚೆಗೆ ಇವತ್ತು ಅವಕಾಶ ಮಾಡಿಕೊಡುತ್ತೇನೆಂದು ಹೇಳಿದ್ದರು.....

ಉಪಾಧ್ಯಕ್ಷಿಣಿಯವರು : ಒಂದು ನಿಮಿಷ ತಾವು ಕುಳಿತುಕೊಳ್ಳಿ. ಈಗ ಮಾನ್ಯ ಚಂದ್ರೇಗೌಡರು ಪ್ರಾರಂಭ ಮಾಡುತ್ತಾರೆ. ಸ್ವಲ್ಪ ಕಾಲದ ನಂತರ ಈ ಅರ್ಧಗಂಟೆ ಚರ್ಚೆ ತೆಗೆದುಕೊಳ್ಳೋಣ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ ಈಗ ಸಭೆ ಗೊಂದಲದಲ್ಲಿದೆ. ಒಂದು ಕಡೆ ನೀರು ಒಂದು ಕಡೆ ಫೋರ್ಪಡೆಯವರು ಮಾತನಾಡಲಿ ಎಂದು ಹೇಳಿದಿರಿ. ಯಾರು ಚರ್ಚೆ ಪ್ರಾರಂಭ 'ಮಾಡಬೇಕು ಸಭೆ ಗೊಂದಲಮಯ ಆಗಿದೆ....

ಉಪಾಧ್ಯಕ್ಷಿಣಿಯವರು : ಗೊಂದಲ ಏನೂ ಇಲ್ಲ. ಮಾನ್ಯ ಚಂದ್ರೇಗೌಡ್ರೇ ತಾವು ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್ : ನಾನು ಎಷ್ಟು ಹೊತ್ತು ಮಾತನಾಡಿ ಎಂದು ಹೇಳುತ್ತೇನೆಯೋ ಅಷ್ಟು ಹೊತ್ತು ಅವರು ಮಾತನಾಡುತ್ತಾರೆ.

ವಿತ್ತೀಯ ಕಾರ್ಯಕಲಾಪಗಳು

1991-92ನೇ ಸಾಲಿನ ಆಯವ್ಯಯದ ಮೇಲೆ ಸಾಮಾನ್ಯ ಚರ್ಚೆ

ಶ್ರೀ ಡಿ.ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು) : ಮಾನ್ಯ ಉಪಾಧ್ಯಕ್ಷರೇ 1991-92ರ ಆಯವ್ಯಯ ಪತ್ರದ ಮೇಲೆ ಚರ್ಚೆಯನ್ನು ತಾವು ಪ್ರಾರಂಭಮಾಡಬೇಕೆಂದು ಆದೇಶ ಕೊಟ್ಟಿದ್ದೀರಿ. ಆದ್ದರಿಂದ ಮಾಡುತ್ತೇನೆ. ಈ ಚರ್ಚೆ ಪ್ರಾರಂಭ ಮಾಡುವ ಬಗ್ಗೆ ನಾವು ಇದುವರೆಗೂ ಸದನದಲ್ಲಿ ಹಾಕಿಕೊಂಡು ಬಂದಂತಹ ನಿಯಮಗಳನ್ನೆಲ್ಲಾ ನಾವು ಗಾಳಿಗೆ ತೂರಿದ್ದೇವೆ. ನಿನ್ನೆ ಏಕಾಏಕಿ ಹೊಸದಾಗಿ ಮಂಡನೆ ಮಾಡಿದ ಕಾರಣ ನಾವು ಸದನವನ್ನು ಬಹಿಷ್ಕರಿಸಬೇಕಾಯಿತು. ಅದಕ್ಕೆ ಆದ ಕಾರಣಗಳನ್ನು ಹೇಳಿದ್ದೇನೆ. ಅದೇ ಸಮಯಕ್ಕೆ ನಾನು ಅಂದುಕೊಂಡಿದ್ದೆ, ಇನ್ನು ಅರ್ಧ ಗಂಟೆ ಸಮಯ ಇತ್ತು. 6 ಗಂಟೆಗೆ ಮತ್ತೊಂದು ಮುಖ್ಯವಾದಂಥ ಸದನದ ಹೊರಗಡೆ ಒಂದು ಸಭೆ ಇದ್ದುದರಿಂದ ಇವೊತ್ತಿಗೆ ಸಭೆಯನ್ನು ಮುಂದೂಡಬಹುದು ಎಂದು ನಾನು ಆಲೋಚನೆ ಮಾಡಿದ್ದೆ. ಆದರೆ ಈ ಆಯವ್ಯಯದ ಪ್ರಾರಂಭಿಕ ಭಾಷಣವನ್ನು ಕೂಡಾ ಈ ಸಾರಿ ಕಾಂಗ್ರೆಸ್ ಪಕ್ಷವೇ ಅಂದರೆ ಆಳುವ ಪಕ್ಷವೇ ತನ್ನದಾಗಿಸಿಕೊಂಡಿದ್ದು, ಸರಿಯಾದ ಕ್ರಮವಲ್ಲವೆಂದು ನಾನು ಈ ಮೂಲಕ ಸದನದ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಸದನದಲ್ಲಿ ನಡೆಯತಕ್ಕಂಥ ವ್ಯವಹಾರವನ್ನು ವೀಕ್ಷಣೆ ಮಾಡತಕ್ಕಂಥ ಜನರ ದೃಷ್ಟಿಯಲ್ಲಿ ಇದು ಆಳುವ ಪಕ್ಷದ ಆಯವ್ಯಯ ಇದರ ಚರ್ಚೆ ಅವರಿಗಷ್ಟೇ ಸೀಮಿತವಾದುದು ಎನ್ನುವ ಅಭಿಪ್ರಾಯವನ್ನು ಕೊಡಬಾರದು, ಎನ್ನುವ ದೃಷ್ಟಿಯಲ್ಲಿ ನಾನು ಮಾತನಾಡುತ್ತಿದ್ದೇನೆ. ರಾಜ್ಯಪಾಲರ ಭಾಷಣದಲ್ಲಿ ವಂದನಾ ನಿರ್ಣಯವನ್ನು ಮಂಡನೆ ಮಾಡತಕ್ಕಂಥ ಮತ್ತು ಅನುಮೋದನೆ ಮಾಡತಕ್ಕಂಥ ಅವಕಾಶ ಅವರಿಗೇ ಇತ್ತು. ಈ ರಾಜ್ಯಕ್ಕೆ ಕೊಡತಕ್ಕಂಥ ಆಯವ್ಯಯದ ಮೇಲೆ ಇನಿಶಿಯೇಟ್ ಮಾಡತಕ್ಕಂಥ ಸಂಪ್ರದಾಯ ನಾಡಿನಲ್ಲಿ, ಈ ದೇಶದಲ್ಲಿ ಈ ರಾಜ್ಯದಲ್ಲಿ ನಡೆದುಕೊಂಡು ಬಂದಿದೆ. ಆ ಸಂಪ್ರದಾಯವನ್ನು ಮತ್ತೊಮ್ಮೆ ಈ ಸರ್ಕಾರಕ್ಕೆ ಈ ಮೂಲಕ ನೆನಪು ಮಾಡಿಕೊಡುತ್ತೇನೆ ಅಷ್ಟೆ.

ಶ್ರೀ ಎಂ. ವೀರಪ್ಪ ಮೊಯಿಲಿ : ತಾವೇ ಬೇಡ ಎಂದು ಹೊರ ಹೋಗಿದ್ದು.

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ಪ್ರಾರಂಭ ಮಾಡುವುದಿಲ್ಲವೆಂದು ಹೇಳಲಿಲ್ಲ. ಈಗ ನೀವು ಹೇಳುತ್ತೀರಿ. ಬಿಸ್‌ನೆಸ್ ಅಡ್ವೈಸರಿ ಕಮಿಟಿಯಲ್ಲಿ ಸಮಯ ನಿಗದಿ ಮಾಡಿದ ಮೇಲೆ ಅರ್ಧ ಗಂಟೆ ಕಾಲದ ಚರ್ಚೆಯನ್ನು ಪ್ರಾರಂಭ ಮಾಡಿ ಎಂದು

ಹೇಳುತ್ತೀರಿ. ಆದರೆ ಬಿಸ್‌ನೆಸ್ ಅಡ್ವೈಸರಿ ಕಮಿಟಿಯಲ್ಲಿ ಬರದೇ ಇದ್ದಂಥ ನಿಮಗೆ ಅನುಕೂಲಕರವಾದ ವಿಷಯಗಳನ್ನು ಜಿಲ್ಲಾ ಪರಿಷತ್ತಿನ ಅಮೆಂಡ್‌ಮೆಂಟ್ ಬಿಲ್ಲ್ ಅನ್ನು ಇಲ್ಲಿ ತರುತ್ತೀರಿ. ಅಂದರೆ ಬಜೆಟ್ ಚರ್ಚೆಗಿಂತ ಮುಖ್ಯವಾಗಿ ಜಿಲ್ಲಾ ಪರಿಷತ್ತಿನ ಅಮೆಂಡ್‌ಮೆಂಟ್ ಬಿಲ್ ನಮಗೆ ಮುಖ್ಯವಾಗಿದೆಯೆಂದು ಬಿಸ್‌ನೆಸ್ ಅಡ್ವೈಸರಿ ಕಮಿಟಿಯಲ್ಲಿ ಈ ಹಿನ್ನೆಲೆಯಲ್ಲಿ ಹೇಳಿದ್ದಿದ್ದರೆ ನಾವು ಒಪ್ಪಿಕೊಳ್ಳುತ್ತಿದ್ದೆವು. ಆದರೆ ತಾವು ಇದನ್ನು ಪೂರಕವಾಗಿ ಹೇಳಲಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ಹಾಗಾದರೆ ಈ ಸದನದಲ್ಲಿ ಬಜೆಟ್ ಮಂಡನೆಯಾದ ಮೇಲೆ ಮತ್ತು ಬಜೆಟ್ ಚರ್ಚೆ ನಡೆಯುತ್ತಿರುವಂಥ ಸಂದರ್ಭದಲ್ಲಿ ಯಾವ ಮಸೂದೆಯನ್ನೂ ಈ ಹಿಂದೆ ಮಂಡಿಸಿರಲಿಲ್ಲವೆಂದು ತಮ್ಮ ವಾದವೇ ? ನೀವೂ ಸಹ ಹಿಂದೆ ಅಧ್ಯಕ್ಷರಾಗಿದ್ದಿರಿ. ನಿಮ್ಮ ಅನುಭವದಿಂದ ಹೇಳಿ.

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ಆ ರೀತಿ ಹೇಳಲಿಲ್ಲ, ಬಿಸ್‌ನೆಸ್ ಅಡ್ವೈಸರಿ ಕಮಿಟಿಯಲ್ಲಿ ನಿರ್ಣಯ ಆಗಿದ್ದು ಎನು? 19ನೇ ತಾರೀಖಿಗೆ ಆಯವ್ಯಯದ ಮೇಲೆ ಚರ್ಚೆಯನ್ನು ಮುಗಿಸಿ ನಂತರ ಫೈನಾನ್ಸ್ ಬಿಲ್ಲನ್ನು ತೆಗೆದುಕೊಂಡು ಮೇಲ್ಮನೆಗೆ ಕಳಿಸಬೇಕೆಂಬ ವಾದವನ್ನು ನೀವೇ ಇಟ್ಟಿರಿ. ಆಗ ನೀವು ಆಯವ್ಯಯಕ್ಕಿಂತ ಮುಖ್ಯವಾದ ವಿಚಾರ ಇದೆ ಇದನ್ನು ತೆಗೆದುಕೊಂಡು ಬರುತ್ತೇವೆಂದು ಹೇಳಿದ್ದಿದ್ದರೆ ನಾನು ಆಬ್ಜಕ್ಷನ್ ಎತ್ತುತ್ತಾ ಇರಲಿಲ್ಲ. ಅದು ಏನೇ ಇರಲಿ . ಈ ಸಾರಿಯ ಆಯವ್ಯಯ ಒಂದು ದೃಷ್ಟಿಯಿಂದ ಚುನಾವಣೆ ಪ್ರೇರಿತವಾದಂಥ ಆಯವ್ಯಯ. ಇದು ಶ್ರೀಮಂತರ ಪರವಾಗಿರತಕ್ಕಂಥ ಆಯವ್ಯಯ, ಸಮಾಜವಾದಿ ಸಿದ್ಧಾಂತ ಮೂಸೆಯಲ್ಲಿ ಬದುಕಿನುದ್ದಕ್ಕೂ....

ಶ್ರೀ ಸಿ. ಬೈರೇಗೌಡ : ಮಾನ್ಯ ವಿರೋಧ ಪಕ್ಷದ ನಾಯಕರೇ ಒಂದು ನಿಮಿಷ ಯೀಲ್ಡ್ ಆಗುವುದಾದರೆ, ಒಂದು ಮಾತು ಹೇಳುತ್ತೇನೆ. ಮಾನ್ಯ ಉಪಾಧ್ಯಕ್ಷೀಣೆಯವರೇ ಈಗಾಗಲೇ ಐದೂವರೆ ಗಂಟೆ ಸಮಯ ಆಗುತ್ತಿದೆ. ತಾವು ಹೇಳಿರುವ ಪ್ರಕಾರ ಕುಡಿಯುವ ನೀರಿನ ಬಗ್ಗೆ ಮಾತನಾಡಲು ಅರ್ಧ ಗಂಟೆ ಕಾಲದ ಚರ್ಚೆಯನ್ನು ಈಗ ತೆಗೆದುಕೊಳ್ಳಬೇಕಾಗುತ್ತದೆ. ದಯವಿಟ್ಟು ಮಾನ್ಯ ವಿರೋಧ ಪಕ್ಷದ ನಾಯಕರು ತಮ್ಮ ಭಾಷಣವನ್ನು ನಾಳೆಗೆ ಮುಂದುವರಿಸಲಿ. ಈಗ ಈ ಕುಡಿಯುವ ನೀರಿನ ಬಗ್ಗೆ ಚರ್ಚೆ ಮಾಡುವುದಕ್ಕೆ ಮಾನ್ಯ ಉಪಾಧ್ಯಕ್ಷೀಣೆಯವರು ಅವಕಾಶ ಮಾಡಿಕೊಡಬೇಕೆಂದು ವಿನಂತಿಸುತ್ತೇನೆ. ಮತ್ತೆ ಶ್ರೀಮಾನ್ ಮಂಜುನಾಥ್ ಕುನ್ನೂರ್‌ರವರು ಈ ಸೂಚನೆಗೆ ರುಜು ಮಾಡಿರುವುದಾಗಿ ಹೇಳಿದ್ದಾರೆ. ಅವರೂ ಸಹ ಸಭೆಯಲ್ಲಿ ಇರುವುದರಿಂದ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಉಪಾಧ್ಯಕ್ಷರು : ಅವರು ಇನ್ನೂ 10-15 ನಿಮಿಷ ಮಾತನಾಡಲಿ. ನಂತರ ಇದನ್ನು ತೆಗೆದುಕೊಳ್ಳೋಣ.

ಶ್ರೀ ವಾಟಾಳ್ ನಾಗರಾಜ್ : ಹಾಗಾದರೆ ಸಭೆ ಎಷ್ಟು ಹೊತ್ತಿಗೆ ಮುಗಿಯುತ್ತದೆ? ಇವತ್ತು 6 ಗಂಟೆಗೆ ಸಭೆ ಮುಗಿಯಬೇಕಾಗಿದೆ. ಅಮೇಲೂ ಅರ್ಧ ಗಂಟೆ ಚರ್ಚೆಗೆ ಅವಕಾಶ ಕೊಡುವುದಾದರೆ ನಮ್ಮದೇನು ಅಭ್ಯಂತರವಿಲ್ಲ.

ಅಧ್ಯಕ್ಷರು : ಫೈಲನ್ನು ತರಿಸಿ ನೋಡಿದೆ. ಅವರೂ ಸಹ ಹಾಕಿದ್ದಾರೆ. ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಡೋಣ. ಅವರೂ ಇನ್ನೂ 10 ನಿಮಿಷ ಮಾತನಾಡಲಿ.

ಶ್ರೀ ವಾಟಾಳ್ ನಾಗರಾಜ್ : ಈಗ ನೀರಿನ ಬಗ್ಗೆ ಮಾತನಾಡಬೇಕಾಗಿದೆ.

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ನಾಳೆ ಮುಂದುವರೆಸುತ್ತೇನೆ. ಆದರೆ ನಾನು ಪ್ರಾರಂಭ ಮಾಡಿದ ವಾಕ್ಯವನ್ನು ಮುಗಿಸಿಬಿಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಆಗಬಹುದು.

ಶ್ರೀ ಡಿ.ಬಿ. ಚಂದ್ರೇಗೌಡ : ಬೈರೇಗೌಡರು ಮಧ್ಯೆ ಪ್ರವೇಶ ಮಾಡಿದಾಗ ನಾನು ಏನು ಹೇಳುತ್ತಿದ್ದೆ ಅಂದರೆ, ಬದುಕಿನ ಉದ್ದಗಲಕ್ಕೂ ಸಮಾಜವಾದದ ಸಿದ್ಧಾಂತವನ್ನು ಹೇಳಿಕೊಂಡು ಬಂದು ಆ ಮಸೂದೆಯಲ್ಲಿಯೇ ತಯಾರಾಗಿ ಸ್ಫುಟಗೊಂಡಂತಹ ಒಂದು ಚಿನ್ನ ಎಂದು ನಾನು ಏನು ಭಾವನೆ ಮಾಡಿದ್ದೆ, ಅವಕಾಶ ಸಿಕ್ಕಿದಾಗ ಯಾವ ಸಿದ್ಧಾಂತವನ್ನು ಬದುಕಿನ ಉದ್ದಗಲಕ್ಕೂ ಹೇಳಿಕೊಂಡು ಬಂದಂತಹ ಮಾನ್ಯ ಮುಖ್ಯ ಮಂತ್ರಿಗಳಾದ ಬಂಗಾರಪ್ಪನವರು ಅದನ್ನು ಅನುಷ್ಠಾನ ಗೊಳಿಸುವಂತಹ ಕಾರ್ಯದಲ್ಲಿ ತದ್ವಿರುದ್ಧವಾದ ದಿಕ್ಕನ್ನು ಹಿಡಿದಿದ್ದಾರೆ. ಅದನ್ನು ನಾನು ನಾಳೆ ಪ್ರತಿಪಾದನೆ ಮಾಡುತ್ತೇನೆ.

ಉಪಾಧ್ಯಕ್ಷರು : ಈಗ ಅರ್ಧಗಂಟೆ ಕಾಲಾವಧಿ ಚರ್ಚೆಯನ್ನು ತೆಗೆದುಕೊಳ್ಳುತ್ತೇನೆ.

ಒಬ್ಬ ಮಾನ್ಯ ಸದಸ್ಯರು : ಈ ಒಂದು ಬಹಳ ಗಹನವಾದ ಚರ್ಚೆ ಆಗುವಾಗ ಮಾನ್ಯ ಮಂತ್ರಿಗಳ ಹಾಜರಿ ಇಲ್ಲಿ ಅವಶ್ಯಕ. ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇಲ್ಲದಿದ್ದರೆ ಚರ್ಚೆಯಿಂದ ಏನೂ ಪ್ರಯೋಜನ ಆಗುವುದಿಲ್ಲ. ನಾವು ಅವರ ಸಮ್ಮುಖದಲ್ಲಿ ಇದು ಆಗಬೇಕಾದಂತಹ ಚರ್ಚೆ. ಇಲ್ಲದಿದ್ದರೆ ಡಿಸ್ಕಷನ್ ಮಾಡುವುದರಿಂದ ಏನೂ ಉಪಯೋಗ ಆಗುವುದಿಲ್ಲ..

ಶ್ರೀ ಬಿ.ಹೆಚ್.ಬನ್ನಿಕೋಡ್ : ಮಾನ್ಯ ಮುಖ್ಯ ಮಂತ್ರಿಗಳು ಬರಬೇಕು..

ಶ್ರೀ ಸಿ.ಬೈರೇಗೌಡ : ಮಾನ್ಯ ಗ್ರಾಮೀಣಾಭಿವೃದ್ಧಿ ಮಂತ್ರಿಗಳೂ ಇಲ್ಲ....

ಶ್ರೀ ಎಲ್.ಆರ್. ಶಿವರಾಮೇಗೌಡ : ಸಂಸದೀಯ ಮಂತ್ರಿಗಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಮೊಯಿಲಿಯವರೇ, ಎಲ್ಲಕ್ಕೂ ನೀವು ಒಬ್ಬರೇ ಸಚಿವರಾ ಇಲ್ಲಿ. ಇದನ್ನು ನೀವು ಒಪ್ಪಿಕೊಳ್ಳುತ್ತೀರಾ? ನಿಮಗೆ ಎಷ್ಟು ತಲೆಗಳು? ಎಷ್ಟು ಕೈಕಾಲುಗಳು? ನಾವು ತಮ್ಮನ್ನು ಒಬ್ಬರೇ ಸಚಿವರು ಅಂದುಕೊಂಡಿದ್ದೆವು. ಎರಡು ಕಣ್ಣು, ಎರಡು ಕಾಲು, ಎರಡು ಕೈ ಎಂದು ತಿಳಿದಿದ್ದೆವು. ಆದರೆ ಇಡೀ ಸಚಿವರ ಸಂಪುಟವೇ ನಿಮ್ಮ ತಲೆಯ ಮೇಲೆ ಇದೆಯೇ ಹೇಗೆ? ನೀರಿನ ಬಗ್ಗೆ ಪ್ರಸ್ತಾಪ ಮಾಡುವಾಗ ಗ್ರಾಮೀಣಾಭಿವೃದ್ಧಿ ಸಚಿವರೇ ಇಲ್ಲ. ನೀವು ಒಂದು ಹೇಳಬಹುದು, ಎರಡು ಹೇಳಬಹುದು. ರಾಮಾಯಣವನ್ನು ನೀವೇ ಹೇಳಿ ಮಹಾಭಾರತವನ್ನು ನೀವೇ ಹೇಳಿದರೆ ಹೇಗೆ? ಪ್ರತಿಯೊಂದಕ್ಕೂ ಅಂದರೆ ಎಲ್ಲ ಚರ್ಚೆಗೂ ನೀವೇ ಉತ್ತರ ಕೊಡುವುದಾದರೆ ಅದು ರುಚಿ ಆಗುವುದಿಲ್ಲ, ಹಿಡಿಸುವುದೂ ಇಲ್ಲ.

ಉಪಾಧ್ಯಕ್ಷರು : ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಬಂದರು.

ಶ್ರೀ ಎಲ್.ಆರ್. ಶಿವರಾಮೇಗೌಡ : ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಇದ್ದಾರೆ. ಅವರಿಗೂ ಸಹ ಅಷ್ಟೆ ಜವಾಬ್ದಾರಿ ಇದೆ, ಚರ್ಚೆಯನ್ನು ಮುಂದುವರಿಸಬಹುದು, ಅದಕ್ಕೆ ತಾವು ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು : ಈಗ ಮಂಜುನಾಥ ಸಿ.ಕುನ್ನೂರ್ ಅವರು ಚರ್ಚೆ ಪ್ರಾರಂಭ ಮಾಡಬಹುದು.

ಅರ್ಧಗಂಟೆ ಕಾಲಾವಧಿ ಚರ್ಚೆ

ಕುಡಿಯುವ ನೀರಿನ ಕಿರು ಬಾವಿಗಳನ್ನೊದಗಿಸುವ ಬಗ್ಗೆ.

ಶ್ರೀ ಮಂಜುನಾಥ್ ಸಿ. ಕುನ್ನೂರು (ಶಿಗ್ಗಾಂ) : ಮಾನ್ಯ ಉಪಾಧ್ಯಕ್ಷರೇ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ನಾವು ಇವತ್ತು ಎಷ್ಟೇ ಚರ್ಚೆ ಮಾಡಿದರೂ ಸಹ ಇದು ಕಡಿಮೆ ಎಂದು ನಾನು ಭಾವಿಸಿದ್ದೇನೆ. ನಾವು ಕೆಲವೇ ದಿವಸಗಳಲ್ಲಿ